ಆ) ಈ ರಸ್ತೆಯಲ್ಲಿ ನಿಗಧಿಪಡಿಸಿದ ಭಾರಕ್ಕಿಂತ ಹೆಚ್ಚುವ ಭಾರದ ಸರಕುಗಳನ್ನು ಲಾರಿ ಮೂಲಕ ಸಾಗಣೆ ಮಾಡುತ್ತಿರುವುದರಿಂದ, ಕಲ್ಲು ಚಪ್ಪಡಿಯಿಂದ ನಿರ್ಮಿಸಿದ ಮೋರಿಗಳ ಚಪ್ಪಡಿಗಳು ಮುರಿದಿದ್ದು, ಅಂತಹ ಮೋರಿಗಳಿಗೆ ಕಾಂಕ್ರೀಟ್ ಚಪ್ಪಡಿಗಳನ್ನು ಹಾಕಿಸಿ ವಾಹನ ಸಂಚಾರ ಸುಗಮಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಹಾಗೂ ಸದರಿ ರಸ್ತೆಯಲ್ಲಿ ತೀವ್ರವಾಗಿ ಗುಂಡಿ ಮುಚ್ಚುವಿಕೆ ಕಾರ್ಯಕ್ರಮವನ್ನು ವಾರ್ಷಿಕ ನಿರ್ವಹಣೆಯಲ್ಲಿ ಕೈಗೊಳ್ಳಲಾಗುತ್ತಿದೆ.

ಇ) ಸರ್ಕಾರದ ಗಮನಕ್ಕೆ ಬಂದಿದೆ.

ಈ) ಈ ರಸ್ತೆಯನ್ನು ಸುಸ್ಥಿತಿಯಲ್ಲಿಡಲು ರಸ್ತೆಯಲ್ಲಿ ಬಿದ್ದಿರುವ ಗುಂಡಿಗಳನ್ನುಮುಚ್ಚಲು ಕ್ರಮ ಕೈಗೊಳ್ಳಲಾಗಿದೆ ಹಾಗೂ ರಸ್ತೆಯನ್ನು ಸಂಚಾರ ಯೋಗ್ಯವಾಗಿಡಲು ಕ್ರಮ ತೆಗೆದುಕೊಳ್ಳಲಾಗಿದೆ.

ಬೀಡಿ ಕಾರ್ಮಿಕರ ಸವಲತ್ತುಗಳು

630 (1139) ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಇರುವ ಬೀಡಿ ಕಾರ್ಮಿಕರ ಕುಟುಂಬಗಳ ಒಟ್ಟು ಸಂಖ್ಯೆ ಎಷ್ಟು ?

ಆ) ಸದರಿ ಬೀಡಿ ಕಾರ್ಮಿಕರಿಗೆ ಸರ್ಕಾರವು ಒದಗಿಸಿರುವ ಸವಲತ್ತುಗಳು ಏನು ?

ಇ) ಎಷ್ಟು ಜನ ಫಲಾನುಭವಿಗಳಿಗೆ ಈ ಸವಲತ್ತು ನೀಡಲಾಗಿದೆ. (ವಿವರ ಒದಗಿಸುವುದು).

ಶ್ರೀ ಕೆ. ಅಮರನಾಥ ಶೆಟ್ಟಿ (ಕಾರ್ಮಿಕರ ರಾಜ್ಯ ಸಚಿವರು) :

ಅ) ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯಲ್ಲಿರುವ ಬೀಡಿ ಕಾರ್ಮಿಕರ ಕುಟುಂಬಗಳ ಸಂಖ್ಯೆ ಕಾರ್ಮಿಕ ಇಲಾಖೆಯಲ್ಲಿ ಲಭ್ಯವಿರುವುದಿಲ್ಲ. ಆದರೆ ಸದರಿ (ಅವಿಭಜಿತ) ಜಿಲ್ಲೆಯಲ್ಲಿ ಅಂತಹ ಒಟ್ಟು 2,38,672 ಕಾರ್ಮಿಕರಿರುತ್ತಾರೆ.

ಆ) ರಾಜ್ಯ ಸರ್ಕಾರವು ಬೀಡಿ ಕಾರ್ಮಿಕರಿಗೆ ಈ ಕೆಳಗಿನ ಪ್ರಮುಖ ಸೌಲಭ್ಯಗಳನ್ನು ಒದಗಿಸಿದೆ :

(1) ಕನಿಷ್ಠ ವೇತನ ನಿಗಧಿಗೊಳಿಸುವುದು.

(2) ಬೋನಸ್ ಪಾವತಿ ಮಾಡುವುದು.

(3) ಪ್ರಸೂತಿ ಸೌಲಭ್ಯ.

(4) ರಾಷ್ಟ್ರೀಯ ಹಾಗೂ ಹಬ್ಬದ ರಜಾ ದಿನಗಳ ಸೌಲಭ್ಯ.

ಅದಲ್ಲದೆ ಕೇಂದ್ರ ಸರ್ಕಾರವು ಈ ಕೆಳಗಿನ ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೊಂಡಿದೆ :-

(1) ಮನೆಗಳನ್ನು ಕಟ್ಟಿಸುವುದು.

(2) ಆರೋಗ್ಯ ಸಂರಕ್ಷಣೆ.

(3) ಶಿಕ್ಷಣ ಸೌಲಭ್ಯ.

(4) ಮನೋರಂಜನೆ ಸೌಲಭ್ಯ.

ಇ) ಆ ಸವಲತ್ತುಗಳನ್ನು ಎಲ್ಲಾ ಅರ್ಹ ಬೀದಿಕಾರ್ಮಿಕರು ಪಡೆಯುತ್ತಿದ್ದಾರೆ.

ಕೇಂದ್ರ ಸರ್ಕಾರದ ಗೃಹ ಯೋಜನೆಯಡಿ ಯಲ್ಲಿ ಎರಡು ವಿಧವಾದ ಯೋಜನೆಗಳಿವೆ.

(1) ನಿಮ್ಮ ಮನೆ ನೀವೇ ಕಟ್ಟಿಕೊಳ್ಳಿ.

(2) ಆರ್ಥಿಕವಾಗಿ ಹಿಂದುಳಿದ ಬೀಡಿ ಕಾರ್ಮಿಕರಿಗೆ ಮನೆ ಕಟ್ಟಿಸಿಕೊಡುವುದು.

ಮೊದಲನೇ ಯೋಜನೆಯಲ್ಲಿ ಕೇಂದ್ರ ಸರ್ಕಾರವು ದಕ್ಷಿಣಕನ್ನಡ ಜಿಲ್ಲೆಯಲ್ಲಿ 112 ಫಲಾನುಭವಿಗಳಿಗೆ ಮನೆ ಕಟ್ಟಿಸಿಕೊಡುವ ಸಲುವಾಗಿ ಸಹಾಯ ಧನ : ಸಾಲವನ್ನು ನೀಡಿರುತ್ತದೆ.

ಅದೇ ರೀತಿ ಎರಡನೇ ಯೋಜನೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನ ತೆಂಕ ಎಡಪದವು ಗ್ರಾಮದಲ್ಲಿ 37 ಮನೆಗಳನ್ನು ಹಾಗೂ ಕಾರ್ಕಳದಲ್ಲಿ 48 ಮನೆಗಳನ್ನು ನಿರ್ಮಿಸಲಾಗಿದ್ದು ವಿವರಗಳನ್ನು ಇದಕ್ಕೆ ಲಗತ್ತಿಸಿರುವ ಅನುಬಂಧ 'ಆ' ದಲ್ಲಿ ನೀಡಲಾಗಿದೆ.

ಅದಲ್ಲದೆ ಕೇಂದ್ರ ಕಲ್ಯಾಣ ಯೋಜನೆಯಡಿಯಲ್ಲಿ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಒಟ್ಟು 10 ಆರೋಗ್ಯ ಘಟಕಗಳನ್ನು ಸ್ಥಾಪಿಸಲಾಗಿದ್ದು, ವಿವರಗಳನ್ನು ಇದಕ್ಕೆ ಲಗತ್ತಿಸಿರುವ ಅನುಬಂಧ 'ಆ' ದಲ್ಲಿ ನೀಡಲಾಗಿದೆ.

ಅನುಬಂಧ-'ಆ'

1. <u>ನಿಮ್ಮ ಸ್ವಂತ ಮನೆ ಕಟ್ಟಿಕೊಳ್ಳಿ ಯೋಜನೆ</u> :

	ತಾಲ್ಲೂಕು	ಮಂಜೂರಾದ ಮನೆಗಳ ಸಂಖ್ಯೆ
1.	ಪುತ್ತೂರು	10
2.	ಕೋಟೆಕಾರ್	2
3.	ಉಡುಪಿ	75
4.	ಬಂಟ್ವಾಳ	9
5.	ಮುಲ್ಕಿ	1
6.	ಕಾರ್ಕಳ	6
7.	ಮಂಗಳೂರು	9
	ಒಟ್ಟು	**112**

2. ಬೀಡಿ ಉದ್ಯಮ ದಲ್ಲಿ ಕೆಲಸ ಮಾಡುವ ಆರ್ಥಿಕವಾಗಿ ಹಿಂದುಳಿದ ಬೀಡಿ ಕಾರ್ಮಿಕರಿಗೆ ಮನೆ ಕಟ್ಟುವ ಯೋಜನೆ :

1.	ಕಾರ್ಕಳ	48
2.	ತೆಂಕ ಎಡಪದವು	37
	ಒಟ್ಟು	85

ಅನುಬಂಧ - ಆ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ 10 ಆರೋಗ್ಯ ಘಟಕಗಳು :

1. ಮೊಬೈಲ್ ಮಡಿಕಲ್ ಯೂನಿಟ್, ಪಡೀಲ್
2. ಸ್ಟಾಟಿಕ್ ಡಿಸ್ಪೆನ್ಸರಿ, ಕೈಕಂಬ
3. ಸ್ಟಾಟಿಕ್ ಕಂ. ಮೊಬೈಲ್ ಡಿಸ್ಪೆನ್ಸರಿ, ತುಂಬೆ
4. ಸ್ಟಾಟಿಕ್ ಕಂ. ಮೊಬೈಲ್ ಡಿಸ್ಪೆನ್ಸರಿ, ದೇರ್ಲಕಟ್ಟೆ
5. ಸ್ಟಾಟಿಕ್ ಕಂ. ಮೊಬೈಲ್ ಡಿಸ್ಪೆನ್ಸರಿ, ಕಾಟಿಪಳ್ಳ
6. ಸ್ಟಾಟಿಕ್ ಕಂ. ಮೊಬೈಲ್ ಡಿಸ್ಪೆನ್ಸರಿ, ಪುತ್ತೂರು
7. ಸ್ಟಾಟಿಕ್ ಕಂ. ಮೊಬೈಲ್ ಡಿಸ್ಪೆನ್ಸರಿ, ವಾಮನಪದವು
8. ಸ್ಟಾಟಿಕ್ ಕಂ. ಮೊಬೈಲ್ ಡಿಸ್ಪೆನ್ಸರಿ, ಮೂಡುಬಿದ್ರೆ
9. ಸ್ಟಾಟಿಕ್ ಕಂ. ಮೊಬೈಲ್ ಡಿಸ್ಪೆನ್ಸರಿ, ಕಾರ್ಕಳ
10. ಸ್ಟಾಟಿಕ್ ಕಂ. ಮೊಬೈಲ್ ಡಿಸ್ಪೆನ್ಸರಿ, ಉಡುಪಿ

ಉತ್ತರ ಕನ್ನಡ-ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ಸ್ಯ ಕ್ಷಾಮ

631 (1141) ಶ್ರೀ ಯು.ಆರ್.ಸಭಾಪತಿ (ಉಡುಪಿ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿನ ಉತ್ತರ ಕನ್ನಡ ಮತ್ತು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೀನುಗಾರರು ಮೀನಿನ ಕ್ಷಾಮದಿಂದ ಕಂಗಾಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಬಂದಿದ್ದಲ್ಲ ಮೀನುಗಾರರು ಬಳಸುವ ಯಾಂತ್ರೀಕೃತ ದೋಣಿಗೆ ಉಪಯೋಗಿಸುವ ಡೀಸಲ್ ಮೇಲಿನ ಮಾರಾಟ ತೆರಿಗೆ ರದ್ದತಿ, ಯಾಂತ್ರೀಕೃತ ದೋಣಿಯ ಸಾಲದ ಬಡ್ಡಿ ಮನ್ನಾ ಮತ್ತು ಮಂಜುಗಡ್ಡೆ ಸ್ಥಾವರಗಳಿಗೆ ಕರ ವಿನಾಯಿತಿ ಮತ್ತು ಸಹಾಯಧನ ಬಿಡುಗಡೆ ಬಗ್ಗೆತುರ್ತು ಕ್ರಮ ಕೈಗೊಳ್ಳುವಲ್ಲಿ ಸರಕಾರ ಪರಿಶೀಲೀಸುವುದೆ (ವಿವರ ನೀಡುವುದು)?

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಯಾಂತ್ರಿಕೃತ ದೋಣಿಗಳನ್ನು ಹೊರತುಪಡಿಸಿ ಎಲ್ಲಾ ಮೀನುಗಾರಿಕೆಗೆ ಅವಶ್ಯಕವಿರುವ ವಸ್ತುಗಳು ಮೀನುಗಾರರಿಗೆ ಬೇಕಾದ ಡೀಸಲ್ ಮತ್ತುಮಂಜುಗಡ್ಡೆ ಸಹಿತ ತೆರಿಗೆ ವಿನಾಯಿತಿಯನ್ನು 1999-2000ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಒಪ್ಪಲಾಗಿದೆ.